ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು**

(E-mail:commissioner.pue@gmail.com. * Ph. No.23361857, 23361858* Fax-23361852)

ಸಂಖ್ಯೆ:ಪಪೂಶಿಇ/ಆಡಳಿತ (ಎ)/ಹೆ.ಉ.ವ.13/2018–19 ದಿನಾಂಕ:09.05.2019

**ಅತಿ ತುರ್ತು**

## ಜ್ಞಾಪನ

ವಿಷಯ: ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೂನ್ಯ ದಾಖಲಾತಿ ಹೊಂದಿರುವ ಕಾಲೇಜಿನ ಮತ್ತು ಸಂಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಮಾಹಿತಿ ನೀಡುವ ಬಗ್ಗೆ.

*****

2018-19 ನೇ ಸಾಲಿನಲ್ಲಿ ರಾಜ್ಯದ ಕೆಲವು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೂನ್ಯ ದಾಖಲಾತಿಯಾಗಿದ್ದು, ಇನ್ನೂ ಕೆಲವು ಕಾಲೇಜಿನಲ್ಲಿ ಕೆಲವು ಸಂಯೋಜನೆಗಳಲ್ಲಿ ಮಾತ್ರ ಶೂನ್ಯ ದಾಖಲಾತಿಯಾಗಿರುತ್ತದೆ. ಹಾಗೂ ಸಂಯೋಜನೆಯಲ್ಲಿ ಒಂದು ಅಥವಾ ಎರಡು ಹುದ್ದೆಗಳು ಮಾತ್ರ ಇದ್ದು, ಸದರಿ ಹುದ್ದೆಯಲ್ಲಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಾ, ಯಾವುದೇ ಕಾರ್ಯಭಾರವಿಲ್ಲದ್ದರಿಂದ ಬೇರೆ ಕಾಲೇಜಿಗೆ ನಿಯೋಜಿಸಿ ವೇತನ ಸೆಳೆಯಲಾಗುತ್ತಿರುವುದನ್ನು ಸಹ ಗಮನಿಸಲಾಗಿದೆ.

ಆದ್ದರಿಂದ ಇಂತಹ ಉಪನ್ಯಾಸಕರಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ–ನಿಯುಕ್ತಿ ಮಾಡಬೇಕಾಗಿರುವುದು ಅನಿವಾರ್ಯವಾಗಿದ್ದ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲಾ ಉಪನಿರ್ದೇಶಕರಿಂದ ಮಾಹಿತಿ ಕೋರಲಾಗಿತ್ತು. ಆದರೆ ಕೆಲವು ಜಿಲ್ಲಾ ಉಪನಿರ್ದೇಶಕರು ಶೂನ್ಯ ದಾಖಲಾತಿ ಕಾಲೇಜಿನ ಮಾಹಿತಿ ಮಾತ್ರ ನೀಡಿರುತ್ತಾರೆಯೆ ವಿನಃ ಶೂನ್ಯ ದಾಖಲಾತಿ ಇರುವ ಸಂಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಮಾಹಿತಿ ನೀಡಿರುವುದಿಲ್ಲ. ಆದ್ದರಿಂದ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ತಮ್ಮ ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೂನ್ಯ ದಾಖಲಾತಿ ಹೊಂದಿರುವ ಕಾಲೇಜಿನ ಮತ್ತು ಸದರಿ ಸಂಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಮಾಹಿತಿಯನ್ನು ಈ ಪತ್ರದ ಜೊತೆ ಲಗತ್ತಿಸಿರುವ ಅನುಬಂಧದಲ್ಲಿ ಆಂಗ್ಲಭಾಷೆಯಲ್ಲಿ ನಮೂದಿಸಿ ದಿನಾಂಕ:14.05.2019ರ ಸಂಜೆ 5.30 ರೊಳಗಾಗಿ ಈ ಕಚೇರಿಯ ಇ–ಮೇಲ್ ಐಡಿ pueest2@gmail.com ಹಾಗೂ ಮುದ್ದಂ ಶ್ರೀಮತಿ ಉಷಾದೇವಿ, ಸಹಾಯಕ ನಿರ್ದೇಶಕರು (ಆಡಳಿತ) ರವರಿಗೆ **ಹಾರ್ಡ್ ಮತ್ತು ಸಾಫ್ಟ್ ಕಾಪಿಯಲ್ಲಿ** ಮಾಹಿತಿ ನೀಡುವುದು.

ಹಾಗೂ ತಮ್ಮ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು ನಿರ್ದೇಶನಾಲಯದ ಗಣಕಶಾಖೆಯಲ್ಲಿ ತಮ್ಮ ಕಚೇರಿಯ ಅಧೀಕ್ಷಕರು ದಿನಾಂಕ:18.05.2019 ರೊಳಗಾಗಿ ಖುದ್ದು ಬಂದು ನಮೂದಿಸುವುದು. ತಪ್ಪಿದಲ್ಲಿ ಮುಂದಿನ ಎಲ್ಲಾ ಆಗುಹೋಗುಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

## ಅನುಬಂಧ-1

**ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೂನ್ಯ ದಾಖಲಾತಿ ಹೊಂದಿರುವ ಕಾಲೇಜಿನ ಮತ್ತು ಸಂಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಿವರ**

| ಕ್ರ.ಸಂ | ಕಾಲೇಜಿನ ಹೆಸರು & ಸಂಕೇತ ಸಂಖ್ಯೆ | ನೌಕರರ ಹೆಸರು | ಉಪನ್ಯಾಸಕರ ಬೋಧನ ವಿಷಯ/ ಬೋಧಕೇತರರಾಗಿದ್ದಲ್ಲಿ ಹುದ್ದೆ | ಜನ್ಮ ದಿನಾಂಕ | ಕೆ ಜಿ ಐ ಡಿ ಸಂಖ್ಯೆ | ಪ್ರಥಮ ಬಾರಿಗೆ ಸೇವೆಗೆ ಸೇರಿದ ದಿನಾಂಕ | ಈ ಕಾಲೇಜಿನ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ |
|---|---|---|---|---|---|---|---|
| | | | | | | | |
| | | | | | | | |

**ಖಾಲಿ ಹುದ್ದೆಗಳ ಮಾಹಿತಿ**

| ಕ್ರ.ಸಂ | ನೌಕರರ ಹೆಸರು ಮತ್ತು ಕಾಲೇಜಿನ ಹೆಸರು & ಸಂಕೇತ ಸಂಖ್ಯೆ | ಉಪನ್ಯಾಸಕರ ಬೋಧನ ವಿಷಯ/ ಬೋಧಕೇತರರಾಗಿದ್ದಲ್ಲಿ ಹುದ್ದೆ | ಈ ಕಾಲೇಜಿನ ಕರ್ತವ್ಯದಿಂದ ಬಿಡುಗಡೆಗೊಂಡ ದಿನಾಂಕ | ವರ್ಗಾವಣೆಗೊಂಡ ಕಾಲೇಜಿನ ಹೆಸರು & ಕಾಲೇಜಿನ ಸಂಕೇತ ಸಂಖ್ಯೆ | ವರ್ಗಾವಣೆಗೊಂಡ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ | ಕೆ ಜಿ ಐ ಡಿ ಸಂಖ್ಯೆ | ಷರಾ |
|---|---|---|---|---|---|---|---|
| | | | | | | | |

ವಿ.ಸೂ: ಜಿಲ್ಲೆಯ ಎಲ್ಲಾ ಮಾಹಿತಿಯನ್ನು ಉಪನಿರ್ದೇಶಕರು ಆಂಗ್ಲಭಾಷೆಯಲ್ಲಿ ನಮೂದಿಸಿ, ಅನುಬಂಧವಾರು ಕ್ರೋಢೀಕರಿಸಿ ಸಾಫ್ಟ್ ಮತ್ತು ಹಾರ್ಡ್ ಕಾಪಿಯಲ್ಲಿ ಸಲ್ಲಿಸುವುದು.

ಉಪನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
– – – – – ಜಿಲ್ಲೆ.